ದಿನಾಂಕ:18-05-2006 ನೇ ಗುರುವಾರ ಮಧ್ಯಾಹ್ನ 3 ಗಂಟೆಗೆ ನರಸಭಾ ಅಧ್ಯಕ್ಷರಾದ ಮಾನ್ಯ ಶ್ರೀ ಸಿ.ವಿ. ಧರ್ಮರಾಜು ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಗೆ ಹಾಜರಿದ್ದ ಸದಸ್ಯರುಗಳು:

| | | |
|---|---|---|
| ಹಾಜರಿ | : | 22 |
| ಗೈರು ಹಾಜರಿ | : | 11 |
| ಒಟ್ಟು | | 33 |

**ಸಭೆಗೆ ಬರಲಿರುವ ವಿಷಯಗಳು:**

ವಿಷಯ :1: ಚಿಕ್ಕಮಗಳೂರು ನಗರ ವ್ಯಾಪ್ತಿಯ ಬೀದಿ ದೀಪಗಳ 2006-07 ನೇ ಸಾಲಿನ ದುರಸ್ತಿ ಮತ್ತು ನಿರ್ವಹಣೆಯ ಬಗ್ಗೆ ದಿನಾಂಕ: 28-02-2006 ರಂದು ಟೆಂಡರ್ ಕರೆದಿದ್ದು, ಸದರಿ ಟೆಂಡರ್‌ರನ್ನು ಮಾನ್ಯ ಜಿಲ್ಲಾಧಿಕಾರಿಗಳು, ದಿ: 12-05-2006 ರಂದು ರದ್ದು ಪಡಿಸಿ ಮರು ಟೆಂಡರ್ ಕರೆಯಲು ಆದೇಶಿಸಿದ್ದು, ಸದರಿ ಬೀದಿ ದೀಪ ದುರಸ್ಥಿ ಹಾಗೂ ನಿರ್ವಹಣೆಯನ್ನು ದಿ: 7-04-2006 ರಿಂದ ಮುಂದೆ ಟೆಂಡರ್ ಪ್ರಕ್ರಿಯೆ ಮುಗಿಯುವವರೆಗೆ ಬೀದಿ ದೀಪಗಳ ದುರಸ್ಥಿ ಮತ್ತು ನಿರ್ವಹಣೆಯ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವ ವಿಚಾರ.

ತೀರ್ಮಾನ :1: ಚಿಕ್ಕಮಮಗಳೂರು ನಗರಸಭಾ ವ್ಯಾಪ್ತಿಯ 2006-07 ನೇ ಸಾಲಿನ ಬೀದಿ ದೀಪಗಳ ಹೊತ್ತಿಸುವಿಕೆ, ಆರಿಸುವಿಕೆ ಮತ್ತು ದುರಸ್ಥಿ ಹಾಗೂ ನಿರ್ವಹಣೆ ಬಗ್ಗೆ ಪಾರದರ್ಶಕ ನಿಯಮಾವಳಿಯಂತೆ ಟೆಂಡರು ಕರೆದಿದ್ದು, ಸದರಿ ಟೆಂಡರ್ ಪ್ರಕ್ರಿಯೆಯನ್ನು ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಇವರು ರದ್ದು ಪಡಿಸಿ ಪುನಃ ಟೆಂಡರ್ ಕರೆಯಲು ಸೂಚಿಸಿದ ಹಿನ್ನೆಲೆಯಲ್ಲಿ ಈ ಕುರಿತು ಸಭೆಯಲ್ಲಿ ಚರ್ಚಿಸಿದ್ದು ದಿನಾಂಕ: 31-03-2006 ಕ್ಕೆ ಈ ಹಿಂದಿನ ಟೆಂಡರುದಾರರ ಅವಧಿ ಮುಗಿದಿದ್ದು ಸದರಿ ಬೀದಿ ದೀಪಗಳ ನಿರ್ವಹಣೆ ಹಾಗೂ ದುರಸ್ಥಿ ಮತ್ತು ಆರಿಸುವಿಕೆ, ಹೊತ್ತಿಸುವಿಕೆ ಕಾರ್ಯವು ತುಂಬಾ ಸೂಕ್ಷ್ಮವಾದ ಹಾಗೂ ಸಾರ್ವಜನಿಕ ಹಿತಾಸಕ್ತಿಗೆ ಅನುಕೂಲವಾದ ಕೆಲಸವಾಗಿದ್ದು, ಸದರಿ ಕಾರ್ಯವನ್ನು 2006-07 ನೇ ಸಾಲಿನಲ್ಲಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿ ಕಡಿಮೆ ದರ ಟೆಂಡರ್ ಸಲ್ಲಿಸಿರುವ ಟೆಂಡರ್‌ದಾರರಾದ ರಾಜಾ ಎಂಟರ್ ಪ್ರೈಸಸ್, ಚಿಕ್ಕಮಗಳೂರು ಇವರು ನಿರ್ವಹಿಸಿಕೊಂಡು ಹೋಗಲು ಕಛೇರಿ ವ್ಯವಸ್ಥೆಯಲ್ಲಿ ಸೂಚಿಸಿರುವುದರಿಂದ ಇಂದಿಗೂ ಸದರಿಯವರು ಈ ಕಾರ್ಯವನ್ನು ಸಕ್ರಮವಾಗಿ ನಿರ್ವಹಿಸಿಕೊಂಡು ಬಂದಿರುವುದರಿಂದ ದಿನಾಂಕ: 1-04-2006 ರಿಂದ ಮುಂದೆ ಟೆಂಡರ್ ಪ್ರಕ್ರಿಯೆ ಮುಗಿದು ಕಾರ್ಯಾದೇಶ ನೀಡುವವರೆಗೂ ರಾಜಾ ಎಂಟರ್ ಪ್ರೈಸಸ್ ಇವರು ಸದರಿ ಬೀದಿ ದೀಪಗಳ ದುರಸ್ಥಿ ನಿರ್ವಹಣೆ ಹಾಗೂ ಆರಿಸುವಿಕೆ, ಹೊತ್ತಿಸುವಿಕೆ ಕೆಲಸವನ್ನು ನಿರ್ವಹಿಸಲು ತಾತ್ಕಾಲಿಕ ಕಾರ್ಯಾದೇಶ ನೀಡಬಹುದೆಂದು ಮತ್ತು ಸದರಿಯವರಿಗೆ ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಕಡಿಮೆ ದರ ಬಂದಲ್ಲಿ ಸದರಿ ದರವನ್ನು ಪಾವತಿಸಬಹುದೆಂದು ಸರ್ವಾನುಮತದಿಂದ ಸಭೆ ಒಪ್ಪಿ ತೀರ್ಮಾನಿಸಿತು.

ಚರ್ಚೆ ಮುಂದುವರೆದು ಈಗಾಗಲೇ ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರು ತಮ್ಮ ಸುತ್ತೋಲೆ ಸಂಖ್ಯೆ: ಪೌನಿ:ತಾಂತ್ರಿಕ:ಟೆಂ:216:03-04 ದಿನಾಂಕ: 23-11-2004 ರಂತೆ ಬೀದಿ ದೀಪಗಳ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಕನಿಷ್ಟ 2 ವರ್ಷ ಅನುಭವ ಇರಬೇಕೆಂದು ಷರತ್ತು ವಿಧಿಸಿದ್ದು, 2005-06 ನೇ ಸಾಲಿನಲ್ಲಿ ಈ ವಿಷಯವಾಗಿ ಸದಸ್ಯರಾದ ಜೆರ್ಮಿಲೋಬೋ ಪ್ರಸ್ತಾಪಿಸಿ 2 ವರ್ಷ ಅನುಭವ ಇರಬೇಕೆಂದು ಟೆಂಡರ್‌ನಲ್ಲಿ ಕೇಳಿರುವುದರಿಂದ ಈ ಕೆಲಸ ಪ್ರಾರಂಭವಾಗಿರುವುದು ಇತ್ತೀಚಿನ ದಿನಗಳಲ್ಲಿ ನಡೆದಿದ್ದು, ಈ ರೀತಿ ಷರತ್ತು ವಿಧಿಸಿದ್ದಲ್ಲಿ ಕೆಲವೇ ಜನ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶ ಇರುವುದರಿಂದ ಈ ಸದಾವಕಾಶವನ್ನು ಉಪಯೋಗಿಸಿಕೊಂಡು ಕೆಲವು ಹಿತಾಸಕ್ತಿಗಳು ಹೆಚ್ಚು ದರದ ಟೆಂಡರ್

PDF Created with deskPDF PDF Writer - Trial :: http://www.docudesk.com

ಸಲ್ಲಿಸಲು ಅವಕಾಶ ಇರುತ್ತದೆ. ಆದುದರಿಂದ ಈ ರೀತಿ ನಗರಸಭೆಯಲ್ಲಿ ಕಾರ್ಯನಿರ್ವಹಿಸಿರುವ ಅನುಭವ ದೃಢೀಕರಣ ಕೇಳುವ ಬದಲು, ಮೆಸ್ಕಾಂ ಸಂಸ್ಥೆಯಲ್ಲಿ ಕೆಲಸ ಮಾಡಿದ ಅನುಭವದ ದೃಢೀಕರಣ ಪತ್ರವನ್ನು ಮಾನ್ಯ ಮಾಡುವಂತೆ ಸರ್ಕಾರದೊಡನೆ ಹಾಗೂ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರೊಂದಿಗೆ ಪ್ರಸ್ತಾವನೆ ಸಲ್ಲಿಸಲು ಹಾಗೂ ಅಲ್ಲಿಯವರೆಗೆ ಮುಂದೆ ಈ ವಿಷಯದಲ್ಲಿ ನಡೆಯುವ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಟೆಂಡರ್‌ದಾರರಿಗೂ ಮೆಸ್ಕಾಂನಿಂದ ಪಡೆದ ಅನುಭವದ ದೃಢೀಕರಣ ಪತ್ರದ ಮೇಲೆ ಟೆಂಡರ್‌ನ್ನು ಮಾನ್ಯ ಮಾಡಲು ಮಾನ್ಯ ಜಿಲ್ಲಾಧಿಕಾರಿಗಳಲ್ಲಿ ವಿನಂತಿಸಿ ಕೊಳ್ಳಬಹುದೆಂದು ಸರ್ವಾನುಮತದಿಂದ ಸಭೆಯಲ್ಲಿ ಒಪ್ಪಿ ತೀರ್ಮಾನಿಸಿತು.

ವಿಷಯ :2: 2005-06 ನೇ ಸಾಲಿನ ಎಸ್.ಎಫ್.ಸಿ. ಅನುದಾನದಡಿಯಲ್ಲಿ ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರದ ದಿನಾಂಕ:11-05-2006 ರಂತೆ ಮುಕ್ತ ನಿಧಿ ಅನುದಾನ 81.19 ಲಕ್ಷ ಮತ್ತು ನೌಕರರ ವೇತನದ ಬಾಕಿ ರೂ.2,78,916.00 ಬಿಡುಗಡೆಯಾಗಿದ್ದು, ಸದರಿ ರೂ 83.97 ಲಕ್ಷಕ್ಕೆ ಕ್ರಿಯಾಯೋಜನೆ ತಯಾರಿಸಿ ಮಂಜೂರಾತಿ ನೀಡುವ ಕುರಿತು ಚರ್ಚಿಸುವ ವಿಚಾರ.

ತೀರ್ಮಾನ:2: ಸಭೆಯಲ್ಲಿ ವಿಷಯ ಪ್ರಸ್ತಾಪಕ್ಕೆ ಬಂದಿದ್ದು ನಗರಸಭೆಗೆ ಕರ್ನಾಟಕ ಸರ್ಕಾರ ಹಣವನ್ನು ನಗರದಅಭಿವೃದ್ಧಿಗೆ ಬಿಡುಗಡೆ ಮಾಡಿರುವ ಬಗ್ಗೆ ಅಭಿನಂದಿಸಲಾಯಿತು. ಮುಂದುವರೆದು ಸದರಿ ರೂ 83.97 ಲಕ್ಷಗಳಲ್ಲಿ ಈ ಕೆಳಕಂಡಂತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು.

ಚಿಕ್ಕಮಗಳೂರು ನಗರಸಭಾ ವ್ಯಾಪ್ತಿಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಡಾಂಬರೀಕರಣದ ಕಾಮಗಾರಿಗಳ ವಿವರ.

1) ಹಿರೇಮಗಳೂರು ರಸ್ತೆ — 8.00 ಲಕ್ಷ
2) ಗಾಂಧಿನಗರ ಮುಖ್ಯ ರಸ್ತೆಯಿಂದ ಶಂಕರಪುರ ಹಾದು ಟಿಪ್ಪು ನಗರ ಕ್ರಾಸ್‌ವರೆಗೆ — 7.00 ಲಕ್ಷ
3) ಕತ್ರಿಮಾರಮ್ಮ ದೇವಸ್ಥಾನದಿಂದ ಶ್ರೀಲೇಖಾ ಚಿತ್ರಮಂದಿರ ಹಾಗೂ ಚೌಡೇಶ್ವರಿ ದೇವಾಲಯದವರೆಗೆ — 4.62 ಲಕ್ಷ
4) ರಾಮಮಂದಿರದಿಂದ ಗೌರೀಕಾಲುವೆಯ ಲಕ್ಷ್ಮಿ ನಿಲಯದವರೆಗೆ ವಾಟರ್ ಟ್ಯಾಂಕ್‌ರಸ್ತೆ — 6.00 ಲಕ್ಷ
5) ಶಿವನೀಲ್ ಗ್ಯಾಸ್‌ನಿಂದ ಕೆ.ಎಂ.ರಸ್ತೆ ಕ್ರಾಸ್‌ವರೆಗೆ — 5.00 ಲಕ್ಷ
6) ಪೋಸ್ಟ್ ಆಫೀಸ್‌ರಸ್ತೆ ನಾಯ್ಡು ಬೀದಿ — 5.50 ಲಕ್ಷ
7) ಅನುಪಮ ಚಿತ್ರಮಂದಿರದ ರಸ್ತೆ — 1.36 ಲಕ್ಷ
8) ಬಸವನಹಳ್ಳಿ ಮುಖ್ಯರಸ್ತೆ ಕ್ರಾಸ್‌ನಿಂದ ಅರವಿಂದ ನಗರದ ವರೆಗೆ — 3.00 ಲಕ್ಷ
9) ಗೋಪಾಲ ಸ್ವಾಮಿ ದೇವಸ್ಥಾನದ ರಸ್ತೆ — 2.10 ಲಕ್ಷ
10) ವಲ್ಲಭ ಗಣಪತಿ ದೇವಸ್ಥಾನದ ರಸ್ತೆ — 2.60 ಲಕ್ಷ
11) ಪದ್ಮಶ್ರೀ ಲಾಡ್ಜ್ ರಸ್ತೆಯಿಂದ ರಾಘವೇಂದ್ರಸ್ವಾಮಿ ಮಠದ ರಸ್ತೆ — 2.75 ಲಕ್ಷ
12) ಅಧಿಭೂತಪ್ಪನ ದೇವಸ್ಥಾನದ ಹಿಂಭಾಗದ ರಸ್ತೆ ಮತ್ತು ಮುಂಭಾಗದ ರಸ್ತೆ — 4.32 ಲಕ್ಷ
13) ಫ್ರೆಂಡ್ಸ್ ಆಟೋ ನಿಲ್ದಾಣದಿಂದ ನೆಹರೂ ರಸ್ತೆಯವರೆಗೆ — 1.50 ಲಕ್ಷ
14) ವಾರ್ಡ್ ನಂ 22 ವಿಜಯಪುರ ಪ್ಲೇಗಿನಮ್ಮನ ದೇವಸ್ಥಾನದ ಹಿಂಭಾಗದ ರಸ್ತೆ — 0.50 ಲಕ್ಷ
15) ವಾರ್ಡ್ ನಂ 22 ವಿಜಯಪುರ ಪೋಸ್ಟ್ ಆಫೀಸ್ ಪಕ್ಕದ ರಸ್ತೆ — 0.50 ಲಕ್ಷ
16) ವಾ.ನಂ. 22 ವಿಜಯಪುರ ಮಾಣಿಕ್ಯರಾಜ್ ಮನೆಯ ಮುಂಭಾಗದರಸ್ತೆ — 0.50 ಲಕ್ಷ
17) ವಾ.ನಂ. 22 ರ ವಿಜಯಪುರ ಖಲಂದರ್ ಮನೆಯ ಮುಂಭಾಗದ ರಸ್ತೆ — 0.25 ಲಕ್ಷ

PDF Created with deskPDF PDF Writer - Trial :: http://www.docudesk.com

18) ವಾ.ನಂ. 26 ರ ಸತೀಶ್ ನಿಲಯದ ಮುಂಭಾಗದ ರಸ್ತೆ 0.50 ಲಕ್ಷ

19) ವಾ.ನಂ 3 ರ ಲಕ್ಷ್ಮೀಪುರದ ರಸ್ತೆ 1.00 ಲಕ್ಷ

20) ವಾ.ನಂ. 33 ರ ಆಂಜನೇಯ ದೇವಸ್ಥಾನದ ಹಿಂಭಾಗದ ರಸ್ತೆ 1.00 ಲಕ್ಷ

21) ಕ್ರಿಶ್ಚಿಯನ್ ಕಾಲೋನಿ ರಸ್ತೆ 1.00 ಲಕ್ಷ

22) ಮಧುವನ ಲೇಔಟ್ ರಸ್ತೆ 1.00 ಲಕ್ಷ

60.00 ಲಕ್ಷ

ಇತರೆ:

23) ನಗರವ್ಯಾಪ್ತಿಯ ಸ್ವಚ್ವೈರ್ ಅಳವಡಿಸಲು 4.48 ಲಕ್ಷ

24) ಬಾಕಿ ಉಳಿದಿರುವ ನೀರು ಸರಬರಾಜು ಬಿಲ್ಲು 5.52 ಲಕ್ಷ

25) ಬಾಕಿ ಉಳಿದಿರುವ ಕಾಮಗಾರಿ ಬಿಲ್ಲು ಜಿಲ್ಲಾಧಿಕಾರಿಗಳಿಂದ ಬಂದಿರುವ)ಪಾವತಿಸಲು 10.00 ಲಕ್ಷ

26) ನಗರಸಭಾ ನೌಕರ ರಜೆ ವೇತನ ಇತರೆ ಪಾವತಿಸಲು 3.97 ಲಕ್ಷ

83.97 ಲಕ್ಷ

ಮೇಲ್ಕಂಡಂತೆ ಅಭಿವೃದ್ಧಿ ಕಾಮಗಾರಿಗಳಿಗೆ ಆಳವಡಿಸಿ ಕೊಂಡಿರುವ ವಿಷಯಗಳನ್ನು ಸಾರ್ವಾನುಮತದಿಂದ ಒಪ್ಪಿ ಮಾನ್ಯ ಜಿಲ್ಲಾಧಿಕಾರಿಗಳಿಗೆ ಆನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲು ಒಪ್ಪಿಗೆ ನೀಡಲಾಯಿತು.

ಸಹಿ/–
ಅಧ್ಯಕ್ಷರು,
ನಗರಸಭೆ, ಚಿಕ್ಕಮಗಳೂರು.

PDF Created with deskPDF PDF Writer - Trial :: http://www.docudesk.com